**ಕರ್ನಾಟಕ ವಿಧಾನ ಪರಿಷತ್**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2256(2639)**

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : **25-03-2022**

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ತಾಲ್ಲೂಕು ಯೋಜನಾ ಸಮಿತಿಗಳಿದ್ದು, ಅವು ನಿಷ್ಕ್ರಿಯವಾಗಿದಲ್ಲದೆ ಕೇವಲ ಹಿಂದುಳಿದ ತಾಲ್ಲೂಕುಗಳಲ್ಲಿ ಮಾತ್ರ ತಾಲ್ಲೂಕು ಯೋಜನಾಧಿಕಾರಿಗಳನ್ನು ಸರ್ಕಾರ ನೇಮಿಸಿದ್ದು, ತಾಲ್ಲೂಕು ಹಂತದ ಎಲ್ಲಾ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಹಾಗೂ ಎಲ್ಲಾ ತಾಲ್ಲೂಕುಗಳಲ್ಲಿ ತಾಲ್ಲೂಕು ಯೋಜನಾ ಸಮಿತಿಯು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಪ್ರತಿ ತಾಲ್ಲೂಕಿಗೆ ತಾಲ್ಲೂಕು ಯೋಜನಾಧಿಕಾರಿಯನ್ನು ನೇಮಿಸಲು ಸರ್ಕಾರದ ನಿಲುವೇನು; | • ಪ್ರಸ್ತುತ 30 ಜಿಲ್ಲೆಗಳಿಗೆ 171 ತಾಲ್ಲೂಕು ಯೋಜನಾಧಿಕಾರಿಗಳ ಹುದ್ದೆ ಸೃಜನೆಯಾಗಿದ್ದು, ಅದರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ 145 ತಾಲ್ಲೂಕು ಯೋಜನಾಧಿಕಾರಿ ಹುದ್ದೆಗಳು ಸೃಜನೆಯಾಗಿರುತ್ತವೆ ಹಾಗೂ ಹುಬ್ಬಳ್ಳಿ ನಗರದ ತಾಲ್ಲೂಕು ಪಂಚಾಯಿತಿಯಲ್ಲಿನ 01 ಹುದ್ದೆ ದಿನಾಂಕ:21-03-2020ರಲ್ಲಿ ರದ್ದಾಗಿರುತ್ತದೆ ಹಾಗೂ ಉಳಿದ 25 ತಾಲ್ಲೂಕು ಯೋಜನಾಧಿಕಾರಿಗಳ ಹುದ್ದೆಗಳು ಸಹಕಾರ ಇಲಾಖೆಯಲ್ಲಿ ಸೃಜನೆಯಾಗಿರುತ್ತವೆ.<br>• ಸರ್ಕಾರದ ಆದೇಶ ಸಂಖ್ಯೆ:ಪಿಡಿಎಸ್/47/ಎಸ್ ಎಸ್ ಎಂ/2021, ಬೆಂಗಳೂರು, ದಿನಾಂಕ:16-07-2021ರಲ್ಲಿ 30 ಜಿಲ್ಲೆಗಳಿಗೆ 171 ತಾಲ್ಲೂಕು ಯೋಜನಾಧಿಕಾರಿಗಳ ಹುದ್ದೆಗಳಿಗೆ ಪ್ರತಿ ವರ್ಷವು ತಾತ್ಕಾಲಿಕ ಹುದ್ದೆಗಳೆಂದು ಮುಂದುವರೆಸಿ ಆದೇಶ ಹೊರಡಿಸಲಾಗುತ್ತಿರುವುದರಿಂದ ಸದರಿ ಹುದ್ದೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಶಾಶ್ವತ ಹುದ್ದೆಗಳೆಂದು ಪರಿಗಣಿಸುವ ಸಲುವಾಗಿ ಆರ್ಥಿಕ ಇಲಾಖೆಗೆ ಶಿಫಾರಸ್ಸು ಮಾಡುವಂತೆ ಕೋರಿ ಈ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಯೋಜನಾ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುತ್ತದೆ. |

| | | |
|---|---|---|
| (ಆ) | ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ತಾಲ್ಲೂಕು ಯೋಜನಾ ಸಮಿತಿಗಳನ್ನು ಬಲಪಡಿಸಲು ಈವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ತಾಲ್ಲೂಕು ಯೋಜನಾ ಮತ್ತು ಅಭಿವೃದ್ಧಿ ಸಮಿತಿಗಳನ್ನು ಬಲಪಡಿಸಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 197 ಜಿಪಸ 2019(ಭಾಗ-3) ದಿನಾಂಕ: 26.07.2019ರಲ್ಲಿ ತಾಲ್ಲೂಕು ಯೋಜನಾ ಮತ್ತು ಅಭಿವೃದ್ಧಿ ಸಮಿತಿಗಳ ಕಾರ್ಯವಿಧಾನಗಳ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 580 ಜಿಪಸ ದಿನಾಂಕ: 07.01.2022 ರನ್ವಯ ತಾಲ್ಲೂಕು ಯೋಜನಾ ಮತ್ತು ಅಭಿವೃದ್ಧಿ ಸಮಿತಿಗಳ ಆಡಳಿತ ವೆಚ್ಚಕ್ಕಾಗಿ ತಲಾ ರೂ.50,000/- ಗಳನ್ನು ಬಿಡುಗಡೆ ಮಾಡಲಾಗುತ್ತಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 176 ಜಿಪಸ 2021, ದಿನಾಂಕ: 20.05.2021ರನ್ವಯ ತಾಲ್ಲೂಕು ಹಾಗೂ ಜಿಲ್ಲಾಮಟ್ಟದ ಸಮಗ್ರ ಯೋಜನೆ(ಗ್ರಾಮೀಣ ಮತ್ತು ನಗರ ಸೇರಿ) ರೂಪಿಸಲು ಅನುವಾಗಲು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ತಹಶೀಲ್ದಾರ್ ರವರನ್ನು ತಾಲ್ಲೂಕು ಯೋಜನೆ ಹಾಗೂ ಅಭಿವೃದ್ಧಿ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ. |

**ಸಂಖ್ಯೆ: ಗ್ರಾಅಪಂರಾ 156 ಜಿಪಸ 2022**

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು